ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ತಿ. ನರಸೀಪುರ ಉಪ ವಿಭಾಗ, ತಿ.ನರಸೀಪುರ

E-mail: pwdaeetnp@gmail.com

ಸಂಖ್ಯೆ :ಸಕಾಇಂ: ಲೋಇ: ಉವಿ: ತಿ.ನ.ಪುರ: ಸ.ಇಂ-5: ಕಟ್ಟಡ ಸುರಕ್ಷತೆ ನವೀಕರಣ :2024-25/ 146 /ದಿನಾಂಕ: 08.05.2024

ರವರಿಗೆ,

ಅಧ್ಯಕ್ಷರು/ಕಾರ್ಯದರ್ಶಿಗಳು,
ಆರೋಹಣ ಎಜುಕೇಷನಲ್ & ಕಲ್ಚರಲ್ ಟ್ರಸ್ಟ್ (ರಿ)
ಆರೋಹಣ ಸೆಂಟ್ರಲ್ ಸ್ಕೂಲ್, ಸೋಸಲೆ ಹೋಬಳಿ,
ಸೋಮನಾಥಪುರ ಗ್ರಾಮ (ಕುಳ್ಳನಕೊಪ್ಪಲು ಗೇಟ್)
ತಿ.ನರಸೀಪುರ ತಾಲ್ಲೂಕು.

ಮಾನ್ಯರೇ,

**ವಿಷಯ:-** **ತಿ.ನರಸೀಪುರ ತಾಲ್ಲೂಕು, ಸೋಸಲೆ ಹೋಬಳಿ, ಸೋಮನಾಥಪುರ (ಕುಳ್ಳನಕೊಪ್ಪಲು ಗೇಟ್) ಗ್ರಾಮದಲ್ಲಿರುವ ಆರೋಹಣ ಎಜುಕೇಷನಲ್ & ಕಲ್ಚರಲ್ ಟ್ರಸ್ಟ್ (ರಿ) ಗೆ ಸೇರಿದ ಆರೋಹಣ ಸೆಂಟ್ರಲ್ ಸ್ಕೂಲ್ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನವೀಕರಿಸಿ ಕೊಡುವ ಬಗ್ಗೆ.**

ಉಲ್ಲೇಖ:-
1) ಸರ್ಕಾರದ ಅಧೀನಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, (ಕಟ್ಟಡಗಳು) ಬೆಂಗಳೂರು ರವರ ಪತ್ರ ಸಂಖ್ಯೆ: ಇ-ಆಫೀಸ್ ಕಡತ ಸಂಖ್ಯೆ: ಲೋಇ: 59: ಬಿ.ಇ.ಡಿ/2019/ದಿನಾಂಕ; 27-11-2019
2) ಕಾರ್ಯಪಾಲಕ ಇಂಜಿನಿಯರ್, ಲೋಇ, ವಿಭಾಗ, ಮೈಸೂರು ಇವರ ಪತ್ರ ಸಂಖ್ಯೆ:308/2022-23/ ದಿನಾಂಕ: 29-04-2022
3) ಈ ಕಚೇರಿ ಪತ್ರ ಸಂಖ್ಯೆ: 513/2023-24/ದಿ:04-07-2023
4) ನಿಮ್ಮ ಅರ್ಜಿ ದಿನಾಂಕ:- 04-05-2024

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (4) ರ ಮನವಿ ಪತ್ರದಲ್ಲಿ 2024-25 ನೇ ಸಾಲಿಗೆ ತಿ.ನರಸೀಪುರ ತಾಲ್ಲೂಕು, ಸೋಸಲೆ ಹೋಬಳಿ, ಸೋಮನಾಥಪುರ (ಕುಳ್ಳನಕೊಪ್ಪಲು ಗೇಟ್) ಗ್ರಾಮದಲ್ಲಿರುವ ಆರೋಹಣ ಎಜುಕೇಷನಲ್ & ಕಲ್ಚರಲ್ ಟ್ರಸ್ಟ್ (ರಿ) ಗೆ ಸೇರಿದ ಆರೋಹಣ ಸೆಂಟ್ರಲ್ ಸ್ಕೂಲ್ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನವೀಕರಿಸಿಕೊಡಲು ದಾಖಲೆಗಳನ್ನು ಒದಗಿಸಿ ಕೋರಿರುತ್ತೀರಿ. ಉಲ್ಲೇಖ (2) ರ ಪತ್ರದಲ್ಲಿ ಕಾರ್ಯಪಾಲಕ ಇಂಜಿನಿಯರ್, ಲೋಇ, ವಿಭಾಗ, ಮೈಸೂರು ರವರು 2022-23 ನೇ ಸಾಲಿನಲ್ಲಿ ಕಟ್ಟಡವು **"Structurally Stable"** ಇರುವುದಾಗಿರುವ ಕಟ್ಟಡದ ಸುಕ್ಷತಾ ಪ್ರಮಾಣ ಪತ್ರದ ನಕಲು ಮತ್ತು ಕಟ್ಟಡ ನೀಲಿ ನಕಾಶೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿರುತ್ತೀರಿ.

ಆದರಂತೆ ತಾವು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ಹಾಗೂ 2022-23 ನೇ ಸಾಲಿನಲ್ಲಿ ನೀಡಿರುವ CONSULTANTS, ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ ಹಾಗೂ ದಿನಾಂಕ 08-05-2024 ರಂದು ಖುದ್ದು ಕಟ್ಟಡವನ್ನು ಪರಿವೀಕ್ಷಿಸಲಾಗಿದ್ದು, ಕಟ್ಟಡವು ಸುರಕ್ಷಿತವಾಗಿರುವುದನ್ನು ಗಮನಿಸಲಾಗಿದ್ದು, ಕಟ್ಟಡವು **"Structurally Stable"** ಇರುವುದಾಗಿ ಎಂದು ಹಾಗೂ ಪ್ರಸಕ್ತ ಶೈಕ್ಷಣಿಕ ಸಾಲಿಗೆ ಸದರಿ ಶಾಲಾ ಕೊಠಡಿಗಳನ್ನು ಉಪಯೋಗಿಸಬಹುದೆಂಬ ಅಂಶವನ್ನು ತಮಗೆ ಸೂಚಿಸುತ್ತಾ, ಸದರಿ ಶಾಲಾ ಕಟ್ಟಡದಲ್ಲಿ ಯಾವುದೇ ಅವಗಡ ಸಂಭವಿಸಿದಲ್ಲಿ ನೀವೇ ನೇರ ಹೊಣೆಗಾರರಾಗಿರುತ್ತೀರಿ ಎಂಬ ಮಾಹಿತಿಯನ್ನು ಸಹ ತಮ್ಮ ಗಮನಕ್ಕೆ ತರುತ್ತಾ, 2024-25ನೇ ಸಾಲಿನ ಶೈಕ್ಷಣಿಕ ಕಾರ್ಯಗಳಿಗೆ ಸದರಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನವೀಕರಿಸಿ ಈ ಕೂಡ ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಉಪ ವಿಭಾಗ,
ತಿ.ನರಸೀಪುರ.

Scanned with OKEN Scanner